


# ಹೆಲ್ಮೆಟ್ ಮ್ಯಾನ್

■ ಪ್ರವೀಣ ಕುಲಕರ್ಣಿ

ನಿಮಗೆ ಗೊತ್ತೆ? 2022ರಲ್ಲಿ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ ಹೆಲ್ಮೆಟ್ ಧರಿಸದೆ ಇದ್ದ ಕಾರಣಕ್ಕೆ ಅಸುನೀಗಿದವರ ಸಂಖ್ಯೆ ಐವತ್ತು ಸಾವಿರ ದಾಟಿದೆ. ಒಂದುವೇಳೆ ಹೆಲ್ಮೆಟ್ ಧರಿಸಿದ್ದಿದ್ದರೆ ಇಷ್ಟೊಂದು ಅಮೂಲ್ಯ ಜೀವಗಳು ಉಳಿಯುತ್ತಿದ್ದವು. ಪತ್ರಿಕೆಗಳಲ್ಲಿ ಬರುವ ಇಂತಹ ಅಂಕಿ ಅಂಶಗಳ ವರದಿಗಳನ್ನು ನಾವು–ನೀವಾಗಿದ್ದರೆ ಓದಿ ಮರೆತುಬಿಡುತ್ತಿದ್ದೆವು. ಆದರೆ, ಬಿಹಾರದ ರಾಘವೇಂದ್ರ ಕುಮಾರ್ ಎಂಬುವವರು ತಮ್ಮ ಸ್ನೇಹಿತನೊಬ್ಬ ಹೆಲ್ಮೆಟ್ ಇಲ್ಲದೆ ಅಸುನೀಗಿದ ವಾರ್ತೆಯನ್ನು ಹೇಗೆ ಸ್ವೀಕರಿಸಿದರೆಂದರೆ ಇದ್ದ ಕೆಲಸವನ್ನು ತೊರೆದು ರಸ್ತೆ ಸುರಕ್ಷತೆ ಜಾಗೃತಿಗಾಗಿ ತಮ್ಮ ಬದುಕನ್ನೇ ಮುಡಿಪಾಗಿ ಇಟ್ಟುಬಿಟ್ಟರು. ಅದಕ್ಕಾಗಿ ಅವರೀಗ ಹೆಲ್ಮೆಟ್ ಮ್ಯಾನ್ ಆಫ್ ಇಂಡಿಯಾ!

ದೆಹಲಿಯಲ್ಲಿ ತಮ್ಮ ಜೊತೆ ಓದುತ್ತಿದ್ದ ಪ್ರೀತಿಯ ಸಹಪಾಠಿ ಶ್ರೀಕೃಷ್ಣ ಎಂಬುವವರು ರಜೆಗಾಗಿ ಊರಿಗೆ ಹೋದಾಗ ಅಪಘಾತದಲ್ಲಿ ಸಾವನ್ನಪ್ಪಿದ್ದು ರಾಘವೇಂದ್ರ ಅವರ ಮನವನ್ನು ಕಲಕಿತ್ತು. ಕೂಡಲೇ ಅವರು ಶ್ರೀಕೃಷ್ಣನ ಊರಿಗೆ ಧಾವಿಸಿದ್ದರು. 'ಒಂದುವೇಳೆ ಮಗ ಹೆಲ್ಮೆಟ್ ಧರಿಸಿದ್ದರೆ ನಾವು ಇವತ್ತು ಅವನನ್ನು ಕಳೆದುಕೊಳ್ಳುವ ಸ್ಥಿತಿ ಬರುತ್ತಿರಲಿಲ್ಲ' ಎಂದು ಅವರ ತಂದೆ–ತಾಯಿ ಪದೇ ಪದೇ ಹೇಳುತ್ತಿದ್ದುದು ರಾಘವೇಂದ್ರ ಅವರ ಮನಸ್ಸಿನ ಮೇಲೆ ಗಾಢ ಪರಿಣಾಮ ಬೀರಿತು. ಸ್ನೇಹಿತನ ನೆನಪಿನಲ್ಲಿ ಸಾಮಾಜಿಕ ಜಾಗೃತಿ ಉಂಟು ಮಾಡುವ ಕಾಯಕದಲ್ಲೇ ಮುಂದಿನ ಜೀವನ ಸಾಗಬೇಕು ಎಂಬ ದೃಢ ನಿಶ್ಚಯಕ್ಕೆ ಬಂದರು. 2014ರಲ್ಲಿ ಹಾಗೆ ಶುರುವಾದ ಅವರ ಹೆಲ್ಮೆಟ್ ಜಾಗೃತಿ ಯಾತ್ರೆ ಈಗ ದೇಶದ ತುಂಬಾ ಹರಡಿದೆ. ಕೇಂದ್ರ ಸಾರಿಗೆ ಹಾಗೂ ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಕೂಡ ರಾಘವೇಂದ್ರ ಅವರ ಅಭಿಮಾನಿಯಾಗಿದ್ದಾರೆ. ರಾಘವೇಂದ್ರ ಅವರು ಕಾರಿನಲ್ಲಿ ಹೊರಟರೂ ರಸ್ತೆ ಸುರಕ್ಷತಾ ಜಾಗೃತಿ ಮೂಡಿಸುವ ಉದ್ದೇಶದಿಂದ ಹೆಲ್ಮೆಟ್ ಧರಿಸಿಯೇ ಪ್ರಯಾಣ ಮಾಡುತ್ತಾರೆ.

ದೇಶದ ಪ್ರಮುಖ ನಗರಗಳ ರಸ್ತೆಗಳಲ್ಲಿ ನಿಂತು, ಹೆಲ್ಮೆಟ್ ಧರಿಸದೆ ಹೊರಟ ದ್ವಿಚಕ್ರವಾಹನಗಳ ಸವಾರರಿಗೆ ಹೆಲ್ಮೆಟ್ ಹಂಚುವ ಕೆಲಸವನ್ನೂ ಮಾಡಿದ್ದಾರೆ. ಹಾಗೆ ಅವರು ಇದುವರೆಗೆ ಹಂಚಿದ್ದು ಒಂದೆರಡಲ್ಲ, ಬರೊಬ್ಬರಿ 60 ಸಾವಿರ ಹೆಲ್ಮೆಟ್‌ಗಳನ್ನು. ರಾಘವೇಂದ್ರ ಅವರ ಜಾಗೃತಿ ವಿಧಾನವೂ ವಿಶಿಷ್ಟವಾಗಿದೆ. ಹೆಲ್ಮೆಟ್ ಇಲ್ಲದೆ ದ್ವಿಚಕ್ರ ವಾಹನ ಓಡಿಸುವವರನ್ನು ಹಿಂಬಾಲಿಸಿ, ಹೆಲ್ಮೆಟ್ ವಿತರಿಸಲು ಹೋಗುವ ಅವರ ಕಾರಿನ ಮೇಲೆ ಹೀಗೆ ಬರೆದಿದೆ: 'ಯಮರಾಜ್ ನೇ ಭೇಜಾ ಹೈ ಬಚಾನೆ ಕೇ ಲಿಯೆ. ಉಪರ್ ಜಾಗ ನಹೀ ಹೈ ಜಾನೆ ಕೇ ಲಿಯೆ'. ತಮ್ಮ ಕರೆಗೆ ಓಗೊಟ್ಟು ನಿಂತ ಸವಾರರ ಮೇಲೆ ಅವರೇ ಪ್ರೀತಿಯಿಂದ ಹೆಲ್ಮೆಟ್ ತೊಡಿಸುತ್ತಾರೆ.

ಸಾಮಾಜಿಕ ಜಾಲತಾಣಗಳಲ್ಲೂ ಅವರು ತುಂಬಾ ಸಕ್ರಿಯವಾಗಿದ್ದಾರೆ. ರಸ್ತೆ ಸುರಕ್ಷತೆಗೆ ಸಂಬಂಧಿಸಿದಂತೆ ವಿಡಿಯೊ ತುಣುಕುಗಳನ್ನು ಮಾಡಿ ಅವುಗಳಲ್ಲಿ ಹರಿಯಬಿಡುತ್ತಾರೆ. ಅವರಿಗಿರುವ ಲಕ್ಷಾಂತರ ಫಾಲೋವರ್‌ಗಳ ಮೂಲಕ ಆ ಸಂದೇಶ ದೇಶದ ಉದ್ದಗಲಕ್ಕೂ ಹರಡುತ್ತದೆ. ರಾಘವೇಂದ್ರ ಅವರು ಈ ಜಾಗೃತಿ ಕಾರ್ಯದಲ್ಲಿ ಎಷ್ಟೊಂದು ಧಾರಾಳಿ ಎಂದರೆ ಹೆಲ್ಮೆಟ್‌ಗಾಗಿ ತಮ್ಮಲ್ಲಿದ್ದ ಹಣವನ್ನೆಲ್ಲ ಖರ್ಚು ಮಾಡಿ, ಈಗ ವ್ಯಯಿಸಲು ಅವರ ಬಳಿ ಹಣವೇ ಇಲ್ಲವಾಗಿದೆ. 'ನನ್ನನ್ನು ನೀವು ಹುಚ್ಚನೆಂದೇ ಕರೆಯಬಹುದು. ಆದರೆ, ಸಮಾಜದ ಒಳಿತಿಗಾಗಿ, ರಸ್ತೆ ಸುರಕ್ಷತೆಯ ಸಂದೇಶ ಸಾರಲಿಕ್ಕಾಗಿ ನಾನು ಇದುವರೆಗೆ ಕೆಲಸ ಮಾಡಿದ್ದೇನೆ. ಈಗ ನನ್ನ ಬಳಿ ಹಣ ಉಳಿದಿಲ್ಲ. ಅನಿವಾರ್ಯವಾಗಿ ನನ್ನ ಹಳ್ಳಿಗೆ ಹಿಂದಿರುಗಬೇಕಾಗಿದೆ. ಆದರೆ, ಜಾಗೃತಿ ಕೆಲಸವನ್ನು ನಾನು ಬಿಡುವುದಿಲ್ಲ' ಎನ್ನುತ್ತಾರೆ ರಾಘವೇಂದ್ರ. ದೆಹಲಿಯಲ್ಲಿ ತಂಗಿದ್ದ ಅವರೀಗ ತಮ್ಮ ಹಳ್ಳಿಯತ್ತ ಮುಖ ಮಾಡಿದ್ದಾರೆ.

'ಹೌದು, ನನಗೂ ಕುಟುಂಬವಿದೆ. ಅದರ ಹೊಣೆಯೂ ನನ್ನ ಮೇಲಿದೆ. ನನಗೊಬ್ಬ ಆರು ವರ್ಷದ ಮಗನಿದ್ದಾನೆ. ಶಿಕ್ಷಣದ ವೆಚ್ಚ ತಗ್ಗಿಸುವ ಉದ್ದೇಶದಿಂದ ನಾನು ಅವನನ್ನು ಸರ್ಕಾರಿ ಶಾಲೆಗೆ ಸೇರಿಸುತ್ತಿದ್ದೇನೆ. ಬಡಮಕ್ಕಳಿಗೆ ಅಗತ್ಯವಾದ ಪುಸ್ತಕಗಳನ್ನು ಸಂಗ್ರಹಿಸಿಕೊಡುವ ಅಭಿಯಾನವನ್ನೂ ನಡೆಸುತ್ತಿದ್ದೇನೆ' ಎಂದೂ ಅವರು ಹೇಳುತ್ತಾರೆ. ಹೆಲ್ಮೆಟ್ ಜಾಗೃತಿ ಅಭಿಯಾನದ ರೂವಾರಿಯಾಗುವ ಮುನ್ನ ಅವರು ಹಲವು ಕಂಪನಿಗಳಿಗೆ ಕಾನೂನು ಸಲಹೆಗಾರರಾಗಿದ್ದರು.

ರಾಘವೇಂದ್ರ ಅವರು ಇಷ್ಟೆಲ್ಲ ಜಾಗೃತಿ ಅಭಿಯಾನ ನಡೆಸಿದ್ದಾರಲ್ಲ, ಅದರ ಪರಿಣಾಮ ಏನು ಅಂತೀರಾ? ಅವರು ವಿತರಿಸಿದ ಹೆಲ್ಮೆಟ್ ಧರಿಸಿದವರ ಪೈಕಿ 30 ಜನ ಗಂಭೀರ ಅಪಘಾತ ಪ್ರಕರಣಗಳಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. 'ನನ್ನ ಗೆಳೆಯನನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ, ನಿಜ. ಆದರೆ, ಕೆಲವು ಜೀವಗಳನ್ನಾದರೂ ಉಳಿಸಿದ ತೃಪ್ತಿ ಇದೆ' ಎಂದು ಅವರು ಹೇಳುತ್ತಾರೆ. ಅವರಿಗೆ, ಪತ್ನಿ ಧನಲಕ್ಷ್ಮಿ ಅವರಿಂದ ಒಳ್ಳೆಯ ಬೆಂಬಲವೂ ಸಿಕ್ಕಿದೆ. ಕೆಲಸವನ್ನೂ ತೊರೆದು ಸಂಪೂರ್ಣವಾಗಿ ಸಮಾಜ ಸೇವೆಗೆ ನಿಲ್ಲುವುದಾಗಿ ಹೇಳಿದರೆ ಯಾವ ಕುಟುಂಬ ತಾನೇ ಸಹಿಸಿಕೊಳ್ಳುತ್ತದೆ ಹೇಳಿ? ಆ ನಿಟ್ಟಿನಲ್ಲಿ ಧನಲಕ್ಷ್ಮಿ ಅವರ ತ್ಯಾಗವೂ ದೊಡ್ಡದೇ.

ಸಮಾಜದ ಕುರಿತು ಹೀಗೆ ನಿಸ್ವಾರ್ಥವಾಗಿ ಯೋಚಿಸುವ ರಾಘವೇಂದ್ರ ಅವರಿಗೊಂದು ಸಲಾಮು. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65